ರಾಜ್ಯದಲ್ಲಿನ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣದ ಬಗ್ಗೆ.

೪೨೮. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಮಾಜ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರಿ ಕಟ್ಟಡಗಳಲ್ಲಿ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳೆಷ್ಟು,

ಆ) ವಿದ್ಯಾರ್ಥಿನಿಲಯಗಳನ್ನು ಬಹಳ ಹಳೆಯ ಕಾಲದ ಕಟ್ಟಡದಲ್ಲಿ ಮತ್ತು ಸರಿಯಾದ ಸ್ಥಳಗಳಲ್ಲಿ ನಡೆಸುವಂತೆ ಸರ್ಕಾರಿ ನಿಯಮವಿದ್ದರೂ ಕಾನೂನನ್ನು ಬದಿಗಿರಿಸಿ ಎಲ್ಲೋ ಒಂದೊಂದು ಕಡೆ ಅವ್ಯವಸ್ಥೆಯಲ್ಲಿ ಇರುವ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಇ) ಹಾಗಿದ್ದಲ್ಲಿ, ವಿದ್ಯಾರ್ಥಿನಿಲಯಗಳು ಸರಿಯಾದ ಸ್ಥಳದಲ್ಲಿ ಇರದೇ ಇರುವಂತಹ ವಿದ್ಯಾರ್ಥಿ ನಿಲಯಗಳನ್ನು ಸುವ್ಯವಸ್ಥಿತ ಸ್ಥಳಗಳಿಗೆ ಸ್ಥಳಾಂತರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ,

ಈ) ಆಂಧ್ರ ಪ್ರದೇಶದಲ್ಲಿ ಸರ್ಕಾರದವರು ವಿದ್ಯಾರ್ಥಿನಿಲಯಗಳನ್ನು ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಂಡು ಆ ಪ್ರಕಾರ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದಿಂದ ವಿದ್ಯಾರ್ಥಿನಿಲಯಗಳ ಕಟ್ಟಡ ಯೋಜನೆ ಹಾಕಿಕೊಂಡು ಹಂತ ಹಂತವಾಗಿ ಕಟ್ಟಡಗಳನ್ನು ಕಟ್ಟಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ವಿ.ಎಲ್. ಪಾಟೀಲ್.—(ಸಮಾಜ ಕಲ್ಯಾಣ ಸಚಿವರು).—

ಅ) ರಾಜ್ಯದಲ್ಲಿ ೨೦೩ ವಿದ್ಯಾರ್ಥಿನಿಲಯಗಳನ್ನು ಸರ್ಕಾರಿ ಕಟ್ಟಡಗಳಲ್ಲಿ ಮತ್ತು ೧೧೭೮ ವಿದ್ಯಾರ್ಥಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ.

ಆ) ವಿದ್ಯಾರ್ಥಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿಯೆ ನಡೆಸಬೇಕೆಂಬುದೇ ನಿಯಮ. ಕೆಲವು ಸ್ಥಳಗಳಲ್ಲಿ ಸೂಕ್ತ ಕಟ್ಟಡಗಳು ದೊರಕದಿರುವುದರಿಂದ, ಲಭ್ಯವಿರುವ ಕಟ್ಟಡಗಳಲ್ಲಿ ಅನಿವಾರ್ಯವಾಗಿ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಇ) ಸೂಕ್ತ ಕಟ್ಟಡಗಳು ದೊರಕಿದಲ್ಲಿ ಕೂಡಲೇ ಸ್ಥಳಾಂತರಿಸಲಾಗುವುದು.

ಈ) ಹೌದು.

ಉ) ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಲೋಕೋಪಯೋಗಿ ಇಲಾಖೆ—ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ—ಉಪಯೋಜನೆಗಳ ಮೂಲಕ ೩೧೧ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಕೈಗೊಳ್ಳಲಾಗಿದ್ದು, ಇವುಗಳ ಪೈಕಿ ೭೭ ಕಟ್ಟಡಗಳು ಪೂರ್ಣಗೊಂಡಿವೆ. ಉಳಿದ ೨೨೪ ಕಟ್ಟಡಗಳ ಕೆಲಸ ನಡೆಯುತ್ತಿದೆ.

ವಿಶೇಷ ಘಟಕ ಯೋಜನೆ

೪೭೩. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಶೇಷ ಘಟಕ ಯೋಜನೆ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮೊದಲಾದ ಅನೇಕ ಯೋಜನೆಗಳನ್ವಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳವರಿಗೆ ಸರ್ಕಾರ ಪ್ರತಿ ವರ್ಷ ಕೋಟ್ಯಾಂತರ ರೂಪಾಯಿ ನೆರವು ನೀಡುತ್ತಿದ್ದು ಈ ಬಗ್ಗೆ ಎಲ್ಲಾ ಕುಟುಂಬಗಳ ಮಾಹಿತಿ ಇಲ್ಲದ ಪ್ರಯುಕ್ತ ಒಮ್ಮೆ ನೆರವು ಪಡೆದವರಲ್ಲಿ ಪುನ: ಪುನ: ಪಡೆಯುತ್ತಿದ್ದಾರೆಂಬ ದೂರಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?